ಎಂದು ನಾನು ಕೇಳಿದೆ. 'ನೀವು ಸಾಹಿತೀನೇ ಕಣ್ರೀ' ಎಂದು ಉತ್ತರಿಸಿದರು. ಅದು ನನಗೆ ಖುಷಿ ಕೊಟ್ಟ ಸಂದರ್ಭ.

ಸಿನಿಮಾದವರು ನನ್ನನ್ನು ಸಾಹಿತಿ ಅಂತ ಒಪ್ಪಿಕೊಳ್ಳುತ್ತಿರಲಿಲ್ಲ. ಸಾಹಿತಿಗಳು ಸಿನಿಮಾದವನು ಎನ್ನುತ್ತಿದ್ದರು. ಛಲದಿಂದಲೇ ನಾನು ಸಾಹಿತಿಯಾಗಿ ಉಳಿದೆನಷ್ಟೆ. ಸಿನಿಮಾ ಬಗೆಗೆ ನನಗೆ ಅಟ್ರಾಕ್ಷನ್ ಇರಲೇಇಲ್ಲ. ಅದರಿಂದಾಗಿಯೇ ಅಷ್ಟು ಕಾಲ ಉಳಿದೆ.

◆ ಪುಟ್ಟಣ್ಣನವರು ಹೇಗೆಲ್ಲ ಕೆಲಸ ತೆಗೆದರು?

ಕಡುಬಿನಲ್ಲಿ ಪ್ರೇಮಪತ್ರ ಇಟ್ಟು ಎಸೆಯುವ ದೃಶ್ಯವೊಂದನ್ನು ಬರೆದಿದ್ದೆ. 'ಹೀಗೆ ಆಗುತ್ತಾ, ನೀನು ಮಾಡಿದ್ದೆಯಾ?' ಎಂದೆಲ್ಲ ಅವರು ಕೇಳಿದ್ದರು. ತೋರಿಸಿದ ಮೇಲೆ ಒಪ್ಪಿದರು. ನಟ ರಾಮಕೃಷ್ಣನನ್ನೇ (ಮನು ಪಾತ್ರಧಾರಿಯನ್ನೇ) ಮಗು ಹೋಲುತ್ತದೆ ಎಂದು ಸೂಚ್ಯವಾಗಿ ಹೇಳುವಂತಹ ಸಂಭಾಷಣೆ ಬರೆಯಬೇಕಿತ್ತು. 'ಇವನನ್ನು ನೋಡಿದರೆ ಮನುವನ್ನೇ ನೋಡಿದಹಾಗೆ ಆಗುತ್ತೆ' ಎಂದು ಇನ್ನೊಂದು ಪಾತ್ರದ ಮೂಲಕ ಹೇಳಿಸಿದೆ. ಅದು ಅವರಿಗೆ ಇಷ್ಟವಾಯಿತು.

◆ ವಿಷ್ಣುವರ್ಧನ್ ಕೂಡ ನೀವು ಸಿನಿಮಾಗೆ ಲಾಯಕ್ಕಲ್ಲ ಎಂದು ಹೇಳಿದ್ದರಲ್ಲವೇ? ಅವರು ಹಾಗೆ ಹೇಳಿದ್ದು ಯಾಕೆ?

ನಾನು ಸಂಭಾಷಣೆ ಬರೆದಿದ್ದ 'ಪ್ರೀತಿ ವಾತ್ಸಲ್ಯ' ಹಿಟ್ ಆಗಿತ್ತು. ಅಂಬರೀಷ್‌ಗೆ ಬರೆದಿದ್ದ 'ಮೂರು ಜನ್ಮ' ಕೂಡ ಚೆನ್ನಾಗಿ ಓಡಿತ್ತು. ಹೀಗಾಗಿ ಭಾರ್ಗವ ನನ್ನನ್ನು ಚೆನ್ನೈಗೆ ವಿಮಾನದಲ್ಲಿ ಕರೆಸಿಕೊಂಡರು. ಮರುದಿನ ಬಸ್‌ನಲ್ಲಿ ಕಳುಹಿಸಿದರಾಯಿತು ಎಂದುಕೊಂಡಿದ್ದರು. 'ಪ್ರೇಮಜಾಲ' ಎಂಬ ಕಾದಂಬರಿ ಆಗ ಪ್ರಕಟವಾಗಿತ್ತು. ಅದನ್ನು ಭಾರ್ಗವ ಮೆಚ್ಚಿಕೊಂಡಿದ್ದರು. ವಿಷ್ಣುವರ್ಧನ್ ನಾಯಕ, ಕುರ್ಚಿ ಮೇಲೆ ಗತ್ತಿನಿಂದ ಕೂತಿದ್ದರು. ನನ್ನ ಪರಿಚಯವಾಯಿತು, 'ಅಲ್ಲಾ ರೀ ಹೀರೊಯಿನ್‌ಗೆ ರೇಪ್ ಆಗುತ್ತಲ್ರೀ... ನಾನೇನು ಮಾಡ್ತಾ ಇರ್ತೀನಿ ಆಗ' ಅಂತ ಕೇಳಿದರು. ನೀವು ಏನು ಮಾಡುತ್ತಾ ಇರುವಿರೋ ಗೊತ್ತಿಲ್ಲ; ಮಧ್ಯರಾತ್ರಿಯಲ್ಲಿ ನನ್ನ ಕತೆಯ ಹೀರೊ ನಿದ್ರೆ ಮಾಡುತ್ತಾ ಇರುತ್ತಾನೆ ಎಂದೆ. ಅವರಿಗೆ ಸಿಟ್ಟು ಬಂದುಬಿಟ್ಟಿತು. 'ರೀ... ಸಾಹಿತಿಗಳು ನನಗೆ ಆಗಿಬರಲ್ಲ ಅಂತ ಹೇಳ್ಲಿಲ್ವಾ?' ಎಂದು ಭಾರ್ಗವ ಅವರ ಕಡೆ ನೋಡಿದರು. ನಾಯಕ ಸನ್ಯಾಸಿ ಆಗಿ ತಲೆಬೋಳಿಸಿಕೊಳ್ಳುವ ಪ್ರಸಂಗವಿತ್ತು. ಅದನ್ನೂ ಬದಲಿಸಬೇಕು ಎಂದು ತಾಕೀತು ಮಾಡಿದರು. 'ಸಿನಿಮಾ ಮಾಡಬೇಡಿ ಬಿಡಿ' ಎಂದು ನಾನು ಖಡಕ್ ಆಗಿ ಉತ್ತರಿಸಿದೆ. 'ಸರಿ, ಹೋಗಬಹುದು... ಊಟ ಮಾಡಿಕೊಂಡು ಹೋಗಿಬನ್ನಿ' ಎಂದುಬಿಟ್ಟರು. ಊಟ ಮಾಡಿದ ಮೇಲೆ ರೂಂಗೆ ಹೋದಾಗ, ಭಾರ್ಗವ ಬೈದುಕೊಂಡರು. 'ಸುಮ್ಮನೆ ಆಯ್ತು ಅಂದಿದ್ದರೆ ಆಗಿತ್ತು. ವಿಷ್ಣು ಕಾಲ್‌ಷೀಟ್ ಸಿಗೋದೇ ಕಷ್ಟ. ಹೇಗೋ ಆಮೇಲೆ ಒಪ್ಪಿಸಬಹುದಿತ್ತು' ಎಂದರು.

ಅಲ್ಲಿಯೇ ಜೋಸೈಮನ್ ಸಿಕ್ಕರು. ಅವರು 'ಪ್ರೇಮಜಾಲ' ಸಿನಿಮಾ ಮಾಡಿದರು. ಅನಂತನಾಗ್, ಮಹಾಲಕ್ಷ್ಮಿ ಪಾತ್ರಧಾರಿಗಳು. ನಾನೇ ಅದಕ್ಕೆ ಬರೆದೆ. ಅತಿಯಾದ ಸೆಂಟಿಮೆಂಟ್‌ನಿಂದಾಗಿ ಅದು ಯಶಸ್ವಿಯಾಗಲಿಲ್ಲ. ಆದರೂ ನನಗೆ ಆ ವಸ್ತು ಇಷ್ಟವಾಗಿತ್ತು.

ಮುಂದೆ ಅದೇ ವಿಷ್ಣುವರ್ಧನ್ ನಾನು ಡೈಲಾಗ್ ಬ್ರೀಫ್ ಮಾಡಿದ್ದನ್ನು ಒಪ್ಪಿಕೊಂಡರು. 'ಜನನಾಯಕ' ಸಿನಿಮಾ ಚರ್ಚೆಯಲ್ಲಿ ತಕರಾರುಗಳನ್ನು ಎತ್ತಿದ್ದರಾದರೂ ಸಿನಿಮಾ ಗೆದ್ದಮೇಲೆ ಅವರಿಗೆ ನಂಬಿಕೆ ಬಂತು. ಆ ಸಿನಿಮಾ ಕತೆ ಸರಿಯಿಲ್ಲ ಎಂದು ನಾನು ಭಾರ್ಗವ ಅವರಿಗೆ ಹೇಳಿದ್ದೆ. ಅವರು ನನ್ನನ್ನು ಸುಮ್ಮನಾಗಿಸಿ, ವಿಷ್ಣು ಒಪ್ಪಿರುವ ಕತೆ ಅದು ಎಂದು ಸಮಾಧಾನ ಮಾಡಿದ್ದರು.